ವಾರದ ಪತ್ರ

## ಪಾತ್ರ ಘನತೆಗೆ ತಕ್ಕದಾಗಿರಲಿ

ಸಿರಿ ಕನ್ನಡದ 'ಯುಗಾಂತರ' ತನ್ನ ವಿಭಿನ್ನ ಶೈಲಿಯ ಮಾತುಗಾರಿಕೆ ಮತ್ತು ಕಥೆಯಿಂದ ಪ್ರಬುದ್ಧವಾಗಿದೆ. ಕಥೆ ಮುಂದುವರೆಯುತ್ತಿರುವಂತೆ ಅರುಂಧತಿಯ ಪಾತ್ರದ ಬೆಳವಣಿಗೆ ಬಗ್ಗೆ ಗೊಂದಲ ಉಂಟಾಗುತ್ತಿದೆ. ಜಿಲ್ಲಾಧಿಕಾರಿ ಪಾತ್ರಕ್ಕೆ ಕಾನೂನಿನ ಅರಿವು, ಸಂರಕ್ಷಣೆ ಮತ್ತು ಪಾಲನೆ ಸ್ವಾಭಾವಿಕವಾಗಿಯೇ ಇರಬೇಕಷ್ಟೆ. ಆದರೆ ನೀಚ, ಕಾನೂನುಬಾಹಿರ ಚಟುವಟಿಕೆಗಳನ್ನು ಏನೂ ಮುಜುಗರವಿಲ್ಲದೆ ಸಹಿಸಿಕೊಂಡು ಆಗಾಗ್ಗೆ ಅವುಗಳ ಬಗ್ಗೆ ವಿಶ್ಲೇಷಣೆಯನ್ನು ಮಾಡುವುದು ಎಷ್ಟು ಉಚಿತ?

ಭ್ರಷ್ಟ ಅಧಿಕಾರಿಯೊಬ್ಬ ರಾಜಾರೋಷವಾಗಿ ವರದಕ್ಷಿಣೆ ಕೇಳುವುದು, ಲಂಚ ಕೊಟ್ಟು ಉದ್ಯೋಗ ಗಿಟ್ಟಿಸುವುದು, ನಕಲಿ ಸಹಿ ಮಾಡುವುದು, ಹೀಗೆ ಅನೇಕ ನ್ಯಾಯಬಾಹಿರ ಚಟುವಟಿಕೆಗಳನ್ನು ಸಹಿಸಿಕೊಳ್ಳಲು ಪ್ರಾಮಾಣಿಕ ಅಧಿಕಾರಿಗೆ ಹೇಗೆ ಸಾಧ್ಯ?

—ಎಂ.ಜಿ. ಶ್ರೀನಾಥ್, ಮೈಸೂರು

## ಕನ್ನಡಕ್ಕೆ ಬರ ಬಂತೆ?

ಕನ್ನಡ ವಾಹಿನಿಗಳಲ್ಲಿ ಕನ್ನಡಕ್ಕೇ ಬರ! ಕೆಲವು ಧಾರಾವಾಹಿಗಳಲ್ಲಿ ತುಟಿಯ ಚಲನೆ ಮತ್ತು ಹೊರಹೊಮ್ಮುವ ಧ್ವನಿಗೂ ತಾಳೆ ಆಗುವುದಿಲ್ಲ. ಅವೆಲ್ಲ ಪರಭಾಷೆಯವೆಂದು ಬಿಡಿಸಿ ಹೇಳಬೇಕಿಲ್ಲ. ಇದೇ ರೀತಿ ಚಲನಚಿತ್ರಗಳು ಕೂಡ. ನಮ್ಮ ಕನ್ನಡ ವಾಹಿನಿಗಳು ಕನ್ನಡ ಕಥೆಗಳ ಕಾರ್ಯಕ್ರಮಗಳನ್ನೇ ಮಾಡುವುದು ಸರಿ ಎನ್ನುವುದು ನನ್ನ ಅನಿಸಿಕೆ.

—ಕೆ.ಎಸ್. ಸೋಮೇಶ್ವರ, ಬೆಂಗಳೂರು

## ತಪ್ಪದ ತಪ್ಪುಗಳು

ಚಂದನ ವಾಹಿನಿಯ 'ಥಟ್ ಅಂತ ಹೇಳಿ' ಕಾರ್ಯಕ್ರಮದಲ್ಲಿ ತಪ್ಪು ಉತ್ತರಗಳು, ತಪ್ಪು ವಿವರಣೆಗಳು ಹೆಚ್ಚಾಗುತ್ತಿವೆ. ಇತ್ತೀಚೆಗೆ ಉತ್ತರ ಒಂದಕ್ಕೆ ವಿವರಣೆ ನೀಡುವಾಗ 'ಅಶ್ವತ್ಥ ವೃಕ್ಷ' ಎಂದರೆ ಆಲದ ಮರ ಎಂದು ಅರ್ಥೈಸಿದ್ದಾರೆ. ಅಶ್ವತ್ಥ ವೃಕ್ಷ ಅಂದರೆ, ಕನ್ನಡದಲ್ಲಿ 'ಅರಳೀ ಮರ' ಎಂದು ಹೇಳಬೇಕಲ್ಲವೇ?

—ರಾಮಚಂದ್ರ ಮರಳ್ಳಿ

## ರಸದೌತಣದ ಮಜಾ

ಚಂದನ ವಾಹಿನಿಯ 'ವಾರದ ಅತಿಥಿ' ಕಾರ್ಯಕ್ರಮದಲ್ಲಿ ನಟ ದೊಡ್ಡಣ್ಣ ಅವರ ಸಂದರ್ಶನ ವರಮಹಾಲಕ್ಷ್ಮಿ ಪೂಜೆಯ ಸಂದರ್ಭದಲ್ಲಿ ಪ್ರಸಾರಗೊಂಡಿತು. ಅದು ಬಾಳೆ ಎಲೆಯಲ್ಲಿ ರಸದೌತಣ ಮಾಡಿದ ಖುಷಿಯನ್ನು ಕೊಟ್ಟಿತು. ಹಿರಿಯ ಕಲಾವಿದರ ಅನುಭವದ ಮಾತುಗಳು, ಕಿರಿಯರಿಗೆ ಮಾರ್ಗದರ್ಶನದಂತೆ ಇದ್ದವು. ಕನ್ನಡ ಚಿತ್ರರಂಗದ ಹಾಸ್ಯಕಲಾವಿದರಾದ ನರಸಿಂಹರಾಜು, ಬಾಲಕೃಷ್ಣ ಅವರನ್ನು ನೆನಪಿಸುವ ಕಾರ್ಯಕ್ರಮ ಇದಾಗಿತ್ತು. ಚಂದನಕ್ಕೆ ಧನ್ಯವಾದಗಳು.

—ಕಮಲಾದೇವಿ ರಾಜಶೇಖರ ಹಳ್ಳೂರ್, ಬೆಂಗಳೂರು

## ಪುನರ್ಜನ್ಮದ ನೆರಳು

ಝೀ ವಾಹಿನಿಯ 'ಜೊತೆ ಜೊತೆಯಲಿ' ವಾಸ್ತವಿಕತೆಯಿಂದ ದೂರ ಸಾಗುತ್ತಿದೆ ಅನಿಸುತ್ತಿದೆ. 'ಪುನರ್ಜನ್ಮ'ದ ಛಾಯೆ ಇದರಲ್ಲಿ ಕಾಣುತ್ತಿದೆ. ಈ ವಸ್ತುವಿನ ಕಥೆ ಕೆಲವು ಸಿನಿಮಾಗಳಲ್ಲಿಯೂ ಬಳಕೆಯಾಗಿ ಜನಪ್ರಿಯಗೊಂಡಿದ್ದವು. ಧಾರಾವಾಹಿಯ ಅನು ತನ್ನ ಹಿಂದಿನ ಜನ್ಮದ ರಾಜನಂದಿನಿಯ ರೂಪ ಎಂಬುದನ್ನು ನಿರೂಪಿಸುವಲ್ಲಿ ಯಶಸ್ವಿಯಾಗುತ್ತಿದ್ದಾಳೆ. ಬಹುತೇಕ ಎಲ್ಲ ಪಾತ್ರಗಳು ತಮ್ಮ ಜವಾಬ್ದಾರಿಯನ್ನು ನ್ಯಾಯಯುತವಾಗಿ ಸಲ್ಲಿಸಿವೆ ಎಂದೆನಿಸುತ್ತದೆ. ಇನ್ನೂ ಮುಂದುವರಿಸಿಕೊಂಡು ಹೋಗುವುದರಲ್ಲಿ ಅರ್ಥವಿಲ್ಲ.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ

## ಉಚ್ಚಾರಣೆ ದೋಷ ಹಾಸ್ಯವೆ?

ಕಲರ್ಸ್ ಕನ್ನಡದ 'ಗಿಚ್ಚಿ ಗಿಲಿಗಿಲಿ' ಕಾರ್ಯಕ್ರಮದ ಸ್ಪರ್ಧಿ ನಿವೇದಿತಾ ಅವರಿಗೆ 'ಭೀಮನ ಅಮಾವಾಸ್ಯೆ' ಎಂದು ಕನ್ನಡದಲ್ಲಿ ಸ್ಪಷ್ಟವಾಗಿ ಉಚ್ಚರಿಸಲು ಬರುವುದಿಲ್ಲ. ಇದು ಕಾರ್ಯಕ್ರಮದಲ್ಲಿದ್ದ ಉಳಿದವರಿಗೆ ತಮಾಷೆಯ ವಿಷಯ. ಚೆಂದದ ಭಾಷೆ ಕನ್ನಡವನ್ನು ಮಾತನಾಡುವುದು ಇವರಿಗೆ ತಮಾಷೆಯಾಗುತ್ತದೆಯೇ? ಉಚ್ಚಾರಣೆಯ ಏರುಪೇರುಗಳು, ಭಾಷಾ ಸಂಗತಿಗಳು ಹಾಸ್ಯದ ಸರಕಾಗಬೇಕೆ?

—ಟಿ.ಪಿ. ಭೀಮಾರೆಡ್ಡಿ, ದಾವಣಗೆರೆ

## ಸುಂದರವೂ ಸರಳವೂ...

ಝೀ ಕನ್ನಡದ 'ಪುಟ್ಟಕ್ಕನ ಮಕ್ಕಳು' ಧಾರಾವಾಹಿ ಸುಂದರವಾಗಿ, ಸರಳವಾಗಿ ಮೂಡಿಬರುತ್ತಿದೆ. ಮನೆಯಲ್ಲಿ ಹಿರಿಯರು, ಕಿರಿಯರು ಕುಳಿತುಕೊಂಡು ನೋಡಬಹುದು. ಪುಟ್ಟಕ್ಕನ ಪಾತ್ರದಲ್ಲಿ ಉಮಾಶ್ರೀ ಅವರ ಅಭಿನಯ ಚೆನ್ನಾಗಿ ಹೊಂದಿಕೆಯಾಗಿದೆ. ಯಾಕೋ ಏನೋ ಕಂಠಿಯ ಪಾತ್ರ ಸಪ್ಪೆ ಎನಿಸುತ್ತದೆ. ಒಟ್ಟಾರೆ ಹೇಳಬೇಕೆಂದರೆ ಉತ್ತಮವಾದ ಧಾರಾವಾಹಿ.

—ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

## ಮಂಗಳಗೌರಿ ಹೇಳಿದ್ದು ಸತ್ಯ

ಕಲರ್ಸ್ ಕನ್ನಡದ 'ಮಂಗಳಗೌರಿ' ಇತ್ತೀಚಿನ ಒಂದು ದೃಶ್ಯದಲ್ಲಿ 'ಹಿಂದೆಲ್ಲಾ ಮನೇಲಿ ಟೀವಿ ಇಲ್ಲ ಅಂತ ಕಣ್ಣೀರು ಬರೋದು. ಆದರೆ ಈಗ ಮನೇಲಿ ಟೀವಿ ಯಾಕಾದರೂ ಇದೆಯಪ್ಪಾ ಅಂತ ನಮ್ಮ ಜನ ಕಣ್ಣೀರು ಹಾಕ್ತಾರೆ' ಎನ್ನುತ್ತಾಳೆ. ಈ ಮಾತು ಅದೆಷ್ಟು ಸತ್ಯ.

ಹೇಳಿದ್ದನ್ನೇ ಹೇಳುವ, ತೋರಿಸಿದ್ದನ್ನೇ ತೋರಿಸುವ ಸುದ್ದಿ ವಾಹಿನಿಗಳು, ಒಂದೊಂದು ಸಂಭಾಷಣೆಯನ್ನೂ ನಿಧಾನವಾಗಿ ಹೇಳಿ ಹಿನ್ನೆಲೆಯ ಸಂಗೀತದ ಜೊತೆ ಮನೆಮಂದಿ ಮುಖ ತೋರಿಸುತ್ತಾ ರಬ್ಬರ್‌ನಂತೆ ಎಳೆಯುವ ಧಾರಾವಾಹಿಗಳನ್ನು ನೋಡಿ ನೋಡಿ ಜನರ ಮನಸ್ಸು ರೋಸಿಹೋಗಿರುವುದು ಸುಳ್ಳಲ್ಲ. ಬಹಳ ಹಿಂದೆಯೇ ಇದನ್ನು 'ಮೂರ್ಖರ ಪೆಟ್ಟಿಗೆ' ಎನ್ನಲಾಗಿತ್ತು. ಮಂಗಳಗೌರಿ ಹೇಳಿದಂತೆ ಟೀವಿ ಏಕಾದರೂ ಇದೆಯೋ ಎಂಬಂತೆ ಆಗಿದೆ.

—ಪತ್ತಂಗಿ ಎಸ್. ಮುರಳಿ, ಬೆಂಗಳೂರು

## ಗ್ರಾಫಿಕ್ಸ್ ಅತಿ, ನಿರೀಕ್ಷೆ ಹುಸಿ

ತುಂಬಾ ನಿರೀಕ್ಷೆಯಿಂದ ಕಾಯುತ್ತಿದ್ದೆವು. ಏಕೆ ಅಂತೀರಾ? ಸಿರಿ ಕನ್ನಡದ 'ವಿಜಯದಶಮಿ' ಧಾರಾವಾಹಿಗೆ. ಆದರೆ ಟೇಕ್ ಆಫ್‌ನಲ್ಲೇ ಠುಸ್ ಎನಿಸಿದ್ದು ಬೇಸರ ಅನಿಸಿತು. ಪ್ರಾರಂಭದಲ್ಲೇ ಹೇಗೆ ಅಂತೀರಾ? 'ಬೆಳೆಯುವ ಪೈರು ಮೊಳಕೆಯಲ್ಲಿ' ಎಂಬ ಮಾತಿನಂತೆ ವಾಸ್ತವವನ್ನು ಪ್ರತಿಬಿಂಬಿಸದೇ ಬರೀ ಗ್ರಾಫಿಕ್ಸ್‌ಮಯವಾಗಿದೆ. ಐದು ಕಂತು ಪ್ರಸಾರವಾದರೂ ಇದ್ದಲ್ಲಿಯೇ ಇದೆ. ಬರುವ ಕಂತುಗಳಲ್ಲದರೂ ವೀಕ್ಷಕರಿಗೆ ಮುದ ನೀಡುವಂತಹ ಜಾಣ್ಮೆ ತೋರಲಿ.

—ಕೆ. ಹೊನ್ನಪ್ಪ, ಕ್ಯಾತ್ಸಂದ್ರ

## ಹೇಳುವುದು ಒಂದು ಮಾಡುವುದು...

ಧಾರಾವಾಹಿಗಳು ಒಳ್ಳೆಯ ಸಂದೇಶ ಕೊಡುವುದರಲ್ಲಿ ಇತ್ತೀಚೆಗೆ ಎಡವುತ್ತಿವೆ. ಕಲರ್ಸ್ ಕನ್ನಡದ 'ಒಲವಿನ ನಿಲ್ದಾಣ'ದಲ್ಲಿ ಸಹಪಾಠಿಗಳೆಲ್ಲಾ ಸೇರಿ ಬೈಕ್‌ಗಳಲ್ಲಿ ಜಾಲಿರೈಡ್ ಹೋಗುತ್ತಾರೆ. ಯಾರೊಬ್ಬರೂ ಶಿರಸ್ತ್ರಾಣ (ಹೆಲ್ಮೆಟ್) ಧರಿಸದೇ ಇರುವುದು ವಿಪರ್ಯಾಸ. ಇದೊಂದು ಮಾತ್ರವಲ್ಲ ಬಹುತೇಕ ಎಲ್ಲ ಧಾರಾವಾಹಿಗಳು ಇದಕ್ಕೆ ಹೊರತಾಗಿಲ್ಲ. 'ಸೀಟ್ ಬೆಲ್ಟ್ ರಹಿತ ಪ್ರಯಾಣ ಶಿಕ್ಷಾರ್ಹ' ಎಂದೋ 'ಹೆಲ್ಮೆಟ್ ರಹಿತ ಚಾಲನೆ ಅಪರಾಧ' ಎಂದೋ ಪರದೆಯ ಮೇಲೆ ತೇಲಿಸಿಬಿಟ್ಟರೆ ಮುಗಿಯುವುದಿಲ್ಲ. ಆ ಕಾನೂನು ಕೇವಲ ವೀಕ್ಷಕರಿಗೆ ಮಾತ್ರವಲ್ಲ. ಪಾತ್ರಧಾರಿಗಳೂ ಪಾಲಿಸಬೇಕು. ನುಡಿದಂತೆ ನಡೆದರೆ ಮಾತ್ರ ಅದು ಉತ್ತಮ ಸಂದೇಶ.

—ಪುಷ್ಪಾ ಎನ್.ಕೆ. ರಾವ್